Reg No B G 155 ಗಣರಾಜ್ಯ ವಿಶೇಷ ಶ್ರೀ 26 - 1 - 1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ದರ್ಮಪ್ರಚಾರಸಗತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತ ರಿಪಬ್ಲಿಕ್ ಚಿರಾಯುವಾಗಿರಲಿ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀನುನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗಸೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಘಟಿಕೋತ್ಸವ

ಇನ್ನು ಮುಂದೆ ಘಟಿಕೋತ್ಸವ ನಡೆಯಬೇಕೆ ಬೇಡವೇ, ಅವಶ್ಯಕವಾದರೆ ಅದಾವ ರೀತಿ ನಡೆಯಬೇಕು ಎಂಬ ಕುರಿತು ಬೆಂಗಳೂರು ವಿಶ್ವವಿದ್ಯಾಲಯ ಸೆನೇಟು ಪರ್ಯಾಲೋಚಿಸಲಿದೆ.

●

ರಾಷ್ಟ್ರಾಧ್ಯಕ್ಷರ ಸಂದೇಶ

ರಾಷ್ಟ್ರಾಧ್ಯಕ್ಷರು-ರಾಷ್ಟ್ರಕ್ಕೆ ನಿನ್ನೆ ನೀಡಿದ ಆಕಾಶವಾಣಿ ಭಾಷಣದಲ್ಲಿ – ವಿದ್ಯಾರ್ಥಿಗಳ ಅಶಿಸ್ತು ಹೆಚ್ಚು ಹರಡುತ್ತಿರುವುದಕ್ಕೆ ನನಗೆ ತೀವ್ರ ಕಳವಳ ಉಂಟುಮಾಡಿದೆ ಎಂದು ನುಡಿದರು ರಾಷ್ಟ್ರವು ನ್ಯಾಯ ಸಾಯ ಹಾಗೂ ಸೈಗಾರಿಕೆ ರಂಗದಲ್ಲಿ ಮಾಡಿರುವ ಅಭಿವೃದ್ಧಿ ಕುರಿತು ಹೇಳಿದರು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಯವರಿಗೆ ಶ್ರದ್ಧಾಂಜಲಿ ಅರ್ಪಿಸಿ ಅವರ ನೀತಿ ಅನುಸರಿಸುವುದರಿಂದ ಆಗುವ ಶ್ರೇಯಸ್ಸನ್ನು ವಿವರಿಸಿದರು. ದೇಶದ ಉನ್ನತಿಯ ದೆಸೆಯಿಂದ ಎಲ್ಲ ಭಾರತವಾಸಿಗಳೂ ಸಹಕಾರದಿಂದ ಕಾರ್ಯತತ್ಪರರಾಗಬೇಕೆಂದು ತಿಳಿಸಿದರು.

★

ಹಿಂದುಳಿದವರು ಅಲ್ಲ,
ಅಭಿವೃದ್ಧಿ ಹೊಂದುತ್ತಿರುವ ಜನಾಂಗ

(ಶ್ರೀ ಎಸ್. ಸುಂದರಂರವರ ಲೇಖನದಿಂದ)

ನಮ್ಮ ದೇಶದ ಜನಸಂಖ್ಯೆಯ ಶೇಕಡ 20 ರಷ್ಟು ಜನರು ಹರಿಜನರು ಮತ್ತು ಗಿರಿಜನರು ಇದ್ದಾರೆ. ಕಳೆದೆರಡು ವರ್ಷಗಳಲ್ಲಿ ಹರಿಜನ-ಗಿರಿಜನರಲ್ಲಿ ಸ್ಫುಟವಾದ ಸಾಮಾಜಿಕ ಮತ್ತು ರಾಜಕೀಯ ಜಾಗ್ರತಿ ಕಂಡುಬಂದಿದೆ. ಹರಿಜನ-ಗಿರಿಜನರಿಗೆ ಇತ್ತೀಚಿನ ದಿನಗಳಲ್ಲಿ ಒದಗಿದ ಅಹಿತಕಾರ ಘಟನೆಗಳಿಂದ ಕಳವಳಗೊಂಡ ಭಾರತದ ಸಂಸತ್ ಸದಸ್ಯರು ತಮ್ಮ ತೀವ್ರ ಆತಂಕವನ್ನು ವ್ಯಕ್ತಪಡಿಸಿದುದರ ಪರಿಣಾಮವಾಗಿ ಪಾರ್ಲಿಮೆಂಟಿನ ಎರಡೂ ಸಭೆಗಳ ಸದಸ್ಯರನ್ನು ಒಳಗೊಂಡ ಸ್ಥಾಯೀ ಸಮಿತಿಯೊಂದನ್ನು ಗಿರಿಜನ ಪ್ರಭಾವಂತ ಸಂತಸ್ ಸದಸ್ಯ ಶ್ರೀ ಬತುಲುತರಿಯವರ ಅಧ್ಯಕ್ಷತೆಯಲ್ಲಿ ನಿಯೋಜಿಸಲಾಯಿತು. ಸರಕಾರ ಹರಿಜನ-ಗಿರಿಜನರ ಏಳಿಗೆಗೆ ಕೈಗೆತ್ತಿಕೊಂಡ ಯೋಜನೆಗಳ ಕಾರ್ಯಪ್ರಗತಿಯ ತನಿಖೆಯನ್ನು ಈ ಸಮಿತಿ ಈಗಾಗಲೇ ಕೈಕೊಂಡಿದೆ.

ಮುಖ್ಯ ಮಂತ್ರಿಗಳ ಸಂದೇಶ

ಬೆಂಗಳೂರಿನಿಂದ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಗಣರಾಜ್ಯೋತ್ಸವ ಸಂದೇಶ ನೀಡುತ್ತಾ – ನನ್ನ ಒಲವು ನನ್ನ ಐಕ್ಯತೆಯಲ್ಲಿದೆ ಮತ್ತು ಆ ಐಕ್ಯತೆ ಕಾಪಾಡಲು ನಾವು ಸಕಲವನ್ನೂ ಮಾಡಬೇಕು ಎಂದಿರುವರು. ದೇಶದಲ್ಲಿ ಆಗಿರುವ ಅನೇಕಾನೇಕ ಅಭಿವೃದ್ಧಿ ಪರಿಸ್ಥಿತಿ ವಿವರಿಸಿದರು.

○

ಕುಟುಂಬ ಯೋಜನೆಯಿಂದ

ಅಲಹಾಬಾದು— ಗ್ರಾಮಾಂತರದ ಮಹಿಳೆಯರು ಅದರಲ್ಲೂ ಪುಲಪುರ ಪಾರ್ಲಿಮೆಂಟು ಕ್ಷೇತ್ರದಲ್ಲಿನವರು ಕುಟುಂಬ ಯೋಜನೆ ವಿರೋಧಿಗಳಾಗಿದ್ದು ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ವೋಟು ಮಾಡದೆ ಪಿಎಸ್ಪಿಗೆ ಮಾಡುವಂತೆ ಕಂಡುಬಂದಿರುವುದೆಂದು ಪಿಎಸ್ಪಿ ನಾಯಕಿ ಶ್ರೀಮತಿ ರಮಣಿಗುಪ್ತ ಹೇಳಿದರು.

●

ಕಿರಿಯ ನೀರಾವರಿ ಯೋಜನೆ

ಬೆಂಗಳೂರು— ಕಿರಿಯ ನೀರಾವರಿ ಕಾರ್ಯಗಳಿಗೆ 4 ನೇ ಯೋಜನೆಯಲ್ಲಿ ರೂ. 20 ಕೋಟಿ ಸ್ಕೀಂ ಜಾರಿಗೆ ತರಲು ಯೋಜಿಸಲಾಗಿದೆ – ಇದರಿಂದ 295000 ಎಕ್ರೆ ಭೂಮಿಗೆ ಸ್ರಯೋಜನವಾಗುವುದು.

ಶೀಘ್ರ ಸಾಮಾಜಿಕ ಬದಲಾವಣೆ ಮತ್ತು ಸಾಂಪ್ರದಾಯಿಕ ಕೃಷಿಯ ಆಧುನೀಕರಣ ಕಾರ್ಯಗಳನ್ನು ಸಾಧಿಸುವ ದುರ್ಗಮ ಮಾರ್ಗದಲ್ಲಿ ತಲೆದೋರುವ ಕಾಠಿಣ್ಯಗಳನ್ನು ತೊಡೆದುಹಾಕಲು ದೇಶ ಮತ್ತು ಸರಕಾರ ನಿರ್ಧಾರ ಮಾಡಿದೆ. ಆಕಾಂಕ್ಷೆ ಮತ್ತು ಕಾನೂನಿನ ಸಮಾನತೆಯುತ್ತ ಸಾಧನೆ ಮತ್ತು ವಾಸ್ತವತೆಗಳನ್ನು ಹತ್ತಿರ ಹತ್ತಿರ ತರುವ ಕಾರ್ಯದಲ್ಲಿ ಮಹತ್ವದ ಕ್ರಮ ಕೈಗೊಳ್ಳಲಾಗಿದೆ.

ಫ್ರಾಂಕ್ ಮೊರೈಸ್‌ರವರ ಸತ್ಯವಾಣಿ

1968 ನೇ ಇಸವಿಯು ರಷ್ಯದಿಂದ ಜೆಕೊಸ್ಲೊವೆಕಿಯಾದ ಕತ್ತು ಹಿಸಿಕಿದ ವರ್ಷವಾಗಿದ್ದು, ನಿಂದಾಸ್ತುತಿಯಲ್ಲಿ ಅದು ವಿಶ್ವ ಮಾನವೀಯ ಹಕ್ಕಿನ ವರ್ಷವಾಗಿತ್ತು – 1969 ರಲ್ಲಿ ಗಾಂಧೀಜೀ ಜನ್ಮ ಶತಮಾನೋತ್ಸವ ನೆರೆದೇರಿಸುತ್ತಿರುವಾಗ, ಆ ಶಾಂತಿ ಮತ್ತು ಅಹಿಂಸಾ ದ್ಯೋತನ ಮನೋಭಾವವು ಹೇಗೆ ಪ್ರತಿಬಿಂಬಿಸಲಾಗುವುದೋ ನೋಡಬೇಕು. ಗಾಂಧೀಜೀ ಇಂದು ವಿಶ್ವಕ್ಕೆ ಬರುವುದಾದರೆ ಭಾರತದಲ್ಲಿ ಸಂಭವಿಸುತ್ತಿರುವದನ್ನು ನೋಡಿ ರೋಧಿಸುವರು.

★

ಅಧ್ಯಕ್ಷರ ಪೋಲೀಸ್ ಮೆಡಲ್

ಬೆಂಗಳೂರು – ಪೋಲೀಸ್ ಕಮಿಷನರ್ ಶ್ರೀ ವೀರಭದ್ರಯ್ಯನವರಿಗೆ ಅಧ್ಯಕ್ಷರ ಪೋಲೀಸ್ ಪದಕ ದೊರೆತಿದೆ.

○

ಸಾಮೂಹಿಕ ರುಜು ಸಂಗ್ರಹಣೆ

ಮಂಗಳೂರು— ಬೀಡಿ ಶಾಸನವನ್ನು ಜಾರಿಗೆ ತರುವಂತೆ ಬಂಟವಾಳ ಭಾಗದ ಬೀಡಿ ಕಾರ್ಮಿಕರು ಕಾರ್ಮಿಕ ಮಂತ್ರಿಗಳಿಗೆ ಅರ್ಪಿಸಲು ಸಾಮೂಹಿಕ ಅರ್ಜಿಗೆ ಸಹಿ ಶೇಖರಿಸಲು ನಿರ್ಧರಿಸಿರುವರು.

★

ಗಾಳೀಪಟ ಮಾರಾಟ

ನವದೆಹಲಿ— ಒಂದು ಸಂಸ್ಥೆಯು ಗಾಳೀಪಟಗಳನ್ನು ಪಶ್ಚಿಮ ಜರ್ಮನಿಗೆ ರಫ್ತು ಮಾಡಲು ಪ್ರಾರಂಭಿಸಿದೆ – ಅನೇಕ ಕಾದಿಂದಲೂ ಆರ್ಡರುಗಳು ಬರುವಂತಿದೆ ವಿದೇಶಗಳಲ್ಲಿ ಪಟಗಳಿಗೆ ರೂ. 15 ರಿಂದ 22 ರವರೆಗೆ ಬರುವ ನಿರೀಕ್ಷೆಯಿದೆ – ಪ್ಲಾಸ್ಟಿಕ್ ಪಟಗಳಿಗೆ 5 ರಿಂದ 6 ಡಾಲರುಗಳು ದೊರೆಯುತ್ತೆ.

ಮಧ್ಯಯುಗದ ಕರ್ನಾಟಕದಲ್ಲಿ ರಾಜ್ಯ ವ್ಯವಸ್ಥೆ

(ಲೇಖಕರು— ಶ್ರೀ ತಿರುನುಲೆ ತಾತಾಚಾರ್ಯ ಶರ್ಮರು)

ವಿವಿಧತೆಯಲ್ಲಿ ಐಕತೆ

ವಿಶಾಲ ಭಾರತ, ಅಖಂಡ ಭಾರತದಿಂದ ಭಿನ್ನವಾದ ರೀತಿಯಲ್ಲಿ ಭಾರತದೊಳಗಿನ ಯಾವ ರಾಜ್ಯವೂ, ಯಾವ ಕಾಲದಲ್ಲೂ, ಪ್ರತ್ಯೇಕ ಮುದ್ರೆಯ ಸಂಸ್ಕೃತಿಯನ್ನು ಬೆಳೆಸಿಕೊಂಡಿಲ್ಲ. ಸಣ್ಣ ಗೃಹವ್ಯವಸ್ಥೆಯಿಂದಾರಂಭಿಸಿ, ಸಾಮ್ರಾಜ್ಯ ವ್ಯವಸ್ಥೆ, ನಿರ್ವಾಹದ ವಲಿಗಿನ ಎಲ್ಲ ಅಂಗಗಳಲ್ಲೂ, ಎಲ್ಲ ಹಂತಗಳಲ್ಲೂ, ಸಮಾನಧರ್ಮ, ಸಮಾನ ಲಕ್ಷಣಗಳು ಕಂಡುಬರುತ್ತವೆ. ಮೂಲಭೂತವಾದೆಲ್ಲ ಪ್ರಕೃತಿಗಳೂ ಸಮಾನ. ಮೇಲೆಮೇಲೆ ಎದ್ದು ಕಾಣುವ ವೇಷ, ಭಾಷೆ, ಊಟ, ಉಪಚಾರ ಮುಂತಾದುವುಗಳನ್ನು ಉತ್ಪ್ರೇಕ್ಷೆಮಾಡಿ, ಭೂತಗನ್ನಡಿಯನ್ನಿಟ್ಟು ಅವುಗಳನ್ನು ನೋಡಿ ' ಭಾರತದಲ್ಲಿ ಏಕೈಕ ಮುದ್ರೆಯ ಸಂಸ್ಕೃತಿಯಿಲ್ಲ " ವೆಂದು ಹೇಳುವುದು ತಪ್ಪು.

ಕರ್ನಾಟಕ ರಾಜ್ಯದ ಜನ ಜೀವನದ ಯಾವ ಅಂಗವನ್ನಾದರೂ ಹೇಗೆ ಪರೀಕ್ಷಿಸಿದರೂ, ಮೂಲಭೂತವಾದ ಭಾರತೀಯ ಲಕ್ಷಣಗಳೇ ಕಾಣುತ್ತವೆ. ಆದರೂ ಪ್ರತಿಯೊಂದು ರಾಜ್ಯದಲ್ಲೂ ನಾನಾ ಕಾರಣಗಳಿಂದ ಹಲವು ಪ್ರಾದೇಶಿಕ ವೈಲಕ್ಷಣ್ಯ ಬೆಳೆದು ಬಂದಿವೆ. ಅವು ಮುಖ್ಯವಲ್ಲ. ಆದರೆ ಅವು ಆ ಪ್ರದೇಶದ ಕ್ಷೇತ್ರವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತವೆ. ಅವೊಂದೂ ಭಾರತೀಯ ಮೂಲ ಪ್ರಕೃತಿ ವಿರೋಧಿಗಳಲ್ಲ;

ಶಾಸನಾಂಕಿತ ಶಾಸನಪದ್ಧತಿ – ರಾಜನನ್ನು " ಆರಿಸು " ವಿಕೆ

ಅಶೋಕನ ಕಾಲದಿಂದ ಈ ನಾಡಿನ ಚರಿತ್ರೆಯನ್ನು ತಕ್ಕಮಟ್ಟಿಗೆ ಧೈರ್ಯದಿಂದ ಗುರುತಿಸಲು ಸಾಕ್ಷ್ಯಪ್ಪು ಸಾಧನ ಸಂಪತ್ತಿದೆ. ಅಶೋಕನ ಶಾಸನಗಳಿಂದ ಜನಜೀವನದ ಮೇಲೆ ' ಧರ್ಮಪ್ರಭಾವ " ಬಿದ್ದಿತೆಂಬುದು ಸ್ಪಷ್ಟ. ಭದ್ರಬಾಹು – ಚಂದ್ರಗುಪ್ತರ, ಶ್ರವಣಬೆಳ್ಗೊಳದ ಐತಿಹ್ಯದಿಂದ, ಸಮ್ರಾಟ್ ಸನ್ಯಾಸಿಯಾದನೆಂಬ ಉಪಾಖ್ಯಾನದಿಂದ, ' ರಾಜ ' ಕಲ್ಪನೆ " ರಾಜನೀತಿ " ಯ ಲಕ್ಷಣ ಹೇಗಿದ್ದಿತೆಂಬುದನ್ನು ಕೊಂಚ ಊಹಿಸಬಹುದು. ಶಾತವಾಹನರ ಕಾಲದ ಶಾಸನಗಳಿಂದ ಸಹ ಈ ನಾಡಿನ ರಾಜಕೀಯ ಜೀವನ ರಚನೆಗೆ ಅನುಕೂಲವಾಗುವ ಸಾಮಗ್ರಿಗಳು ಸಿಗುತ್ತವೆ.

ಕದಂಬ ರಾಜಮನೆತನದ ಚರಿತ್ರೆಯ ಮೊದಲ ಪುಟಗಳೆಷ್ಟು ಮೋಹಕವೋ ಅಷ್ಟೂ ಅರ್ಥಪೂರ್ಣವಾಗಿವೆ. ಮಯೂರಶರ್ಮ ತಥವಾ ಮಯೂರವರ್ಮ ಆ ರಾಜಮನೆತನದ ಮೂಲಪುರುಷ. ಅವನು ರಾಜಪದಕ್ಕೆ ಹೇಗೆ ಬಂದನೆಂಬುದನ್ನಾಲಿಸಿ. ವಿಜಯ ವೈಜಯಂತೀಪುರ – ಬನವಾಸಿ ಕದಂಬರ ರಾಜಧಾನಿ. ಪಶ್ಚಿಮ ಕರಾವಳಿ ಕ್ಷೇತ್ರ ಮತ್ತು ಅದರ ಹಿನ್ನಾಡು ಆ ರಾಜ್ಯವಿಸ್ತಾರ. ಆ ರಾಜ್ಯ ರೂಪುಗೊಂಡಾಗ ಅಲ್ಲಿನ ಜನಕ್ಕೆ ಒಬ್ಬ ' ರಾಜ" ಬೇಕೆನ್ನಿಸಿತು. ಹಾಗೆ ಅಪೇಕ್ಷೆ ಹುಟ್ಟಿದ ಕೂಡಲೇ ಆ ರಾಜನನ್ನು " ಆರಿಸಿ ' ಕೊಳ್ಳುವ ತಂತ್ರವೊಂದು ತೋರಿಬಂತು. ಪಟ್ಟದ ಆನೆಯ ಸೊಂಡಲಿಗೆ ಹೂವಿನ ಹಾರವೊಂದನ್ನು ಕೊಟ್ಟರು. ಆನೆಯು ಊರಿನ ಬೀದಿಗಳೆಲ್ಲೆಲ್ಲ ಓಡಾಡಿತು. ಕಡೆಗೆ ಒಂದು ಮನೆಯ ಬಾಗಿಲಲ್ಲಿ ನಿಂತಿದ್ದ ಸಣ್ಣ ವಯಸ್ಸಿನ ಹುಡುಗನ ಬಳಿ ಬಂದು ಅವನ ಕೊರಳಿಗೆ ಹಾರವನ್ನು ಹಾಕಿತು. ಜನವೆಲ್ಲ ಜಯಕಾರ ಮಾಡಿದರು. ' ಇವನೇ ನಮ್ಮ ರಾಜ " ಅಂದು ಅವನನ್ನು ಸಿಂಹಾಸನದ ಮೇಲೆ ಕೂಡಿಸಿದರು. ಇವನೇ " ಬನವಾಸಿಪುರವರೇಶ್ವರ ' ಸ್ವಾಮಿ ಮಹಾಸೇನ ಪಾದಾನುಧ್ಯಾತ " !

ಈ ಕಥೆಯಲ್ಲಿ ' ಜನತು ರಾಜನನ್ನು ಆರಿಸುವ ಸಂಪ್ರದಾಯ " ದ ಲಕ್ಷಣಗಳು ಕಂಡುಬರುತ್ತವೆ.

ಧರ್ಮದತ್ತನಾದ ರಾಜ್ಯ ರಾಜಪಟ್ಟ

ಗಂಗವಂಶೀಯ ಅರಸರಿಗೆ ಸಂಬಂಧಪಟ್ಟಂತೆ ಆ ಅರಸರ ಆಳ್ವಿಕೆಯ ಆರಂಭದ ಕಥೆಯೂ ಬಹಳ ಅರ್ಥಗರ್ಭಿತವಾಗಿದೆ. ದತಿಗ, ಮಾಧವ ಎಂಬಿಬ್ಬರು ಸೋದರರು ಒಬ್ಬ ತಂಗಿ ಆಲಬ್ಬೆ. ಮೂವರೂ ತಮ್ಮ ಪರಿವಾರದೊಂದಿಗೆ ದಕ್ಷಿಣ ದೇಶಕ್ಕೆ ಬಂದರು. ಪೆರೂರ ಬಳಿ ಬಂದಿಳಿದರು. ಅಲ್ಲಿ ಕಾಣರ್ಗಧದ ಆಚಾರ್ಯಸಿಂಹ ನಂದಿಯ ದರ್ಶನಮಾಡಿದರು. ಆಚಾರ್ಯರ ಅನುಗ್ರಹದಿಂದ ರಾಜ್ಯ ಲಾಭವಾಯಿತು. ಮಾಧವ " ಕುವಳಾಲ ಪುರವರಾಧೀಶ್ವರ " ನಾದ ; ನಂದಿ " ಗಿರಿನಾದ ' ನಾದ ; ಆಚಾರ್ಯಸಿಂಹ ನಂದಿಯು ಕರ್ಣಕಾರ ಪುಷ್ಪಗಳಿಂದ ಕಿರೀಟಮಾಡಿ, ಮಾಧವನ ' ಮುಕುಟ ಬಂಧೋತ್ಸವ " ಮಾಡಿದ.

ಆ ಸಮಯದಲ್ಲಿ ಮಾಧವನಿಗೆ ಈ ರೀತಿ ಎಚ್ಚರಿಕೆಯನ್ನಿತ್ತ :

' ಕೊಟ್ಟಮಾತಿಗೆ ನೀನು ತಪ್ಪಿದರೆ,
ಜನ ಶಾಸನದಿಂದ ನೀನು ಜಾರಿದರೆ,
ವರಪತಿಯರನ್ನು ನೀನು ಅಪಹರಿಸಿದರೆ,
ಮದ್ಯ, ಮಾಂಸ, ಮತ್ಸ್ಯಭಕ್ಷಣ ಮಾಡಿದರೆ,
ನೀಚ ಜನರ ಸಹವಾಸ ಮಾಡಿದರೆ,
ದೀನ ದಲಿತರಿಗೆ ದಾನಧರ್ಮ ಮಾಡದೆ ಹೋದರೆ,
ರಣಭೂಮಿಯಿಂದ ನೀನು ಹಿಮ್ಮೆಟ್ಟಿದರೆ,
ನಿನ್ನ ವಂಶ ನಾಶವಾಗುತ್ತದೆ '

ಈ ಮಾಧವನನ್ನು ಗಂಗವಾಡಿ, ಗಂಗ ಸಾಮ್ರಾಜ್ಯದ ಪ್ರಜೆಗಳು ' ಧರ್ಮ ಮಹಾರಾಜ ' ನೆಂದು ಕರೆದರು. ಈ ವಂಶದ ಮೊದಲನೆಯ ಶಿವಕುಮಾರನನ್ನು ' ಶಿಷ್ಟಜನಪ್ರಿಯ " ನೆಂದು ಹೆಸ್ಮೆಯಿಂದ ಸಂಬೋಧಿಸಿದರು. ' ಯುಧಿಷ್ಠಿರ " ನೆನಿಸಿಕೊಂಡ ದುರ್ವಿನೀತ. ಇಮ್ಮಡಿ ರಾಜಮಲ್ಲ ' ಮಾಂಧಾತೃಸಮ " ನೆಂದು ಖ್ಯಾತನಾದ. [ಲೇಖನ ಕಾವೇರಿ]

★

ಗಣರಾಜ್ಯೋತ್ಸವ

ಮೈಸೂರು— ಬೆಳಿಗ್ಗೆ ಮೈಸೂರು ಪುರಭವನದ ಆವರಣದಲ್ಲಿ ಪುರಸಭೆಯಿಂದ ಗಣರಾಜ್ಯೋತ್ಸವವು ಆಚರಿಸಲ್ಪಟ್ಟಿತು – ಸಂಜೆ ಪುರಭವನದ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ.

—

ಆಕ್ಕಿ ವಶ

ಮಂಗಳೂರು— ಕೇರಳದ ಗಡಿಯ ಗುಡಕ್ಕದ ಹತ್ತಿರ ರೂ. 10000 ಬೆಲೆಯ 75 ಮೂಟೆ ಅಕ್ಕಿ ವಶಪಡಿಸಿ ಕೊಳ್ಳಲಾಯಿತು.

ಗಣರಾಜ್ಯೋತ್ಸವ ಶುಭಾಶಯಗಳು

ಮೈಸೂರಿನಲ್ಲಿದ್ದಾಗ
ಇಲ್ಲಿ ತಂಗಿರಿ

ಹೊಟೇಲ್ ನುಜಾತ

ಎಲ್ಲ ಆಧುನಿಕ ಸೌಕರ್ಯಗಳನ್ನೊಳಗೊಂಡ
ಏಕೈಕ ಸುಖಕರವಾದ ಹೊಟೇಲ್

ಟಿಲಿಫೋನ್‌ಗಳು : ತಂತಿ : ಕಂಫರ್ಟ್

1728 ★ ಎಲ್ಲ ಕೋಣೆಗೂ ಪ್ರತ್ಯೇಕ ಅಟಾಚ್ಡ್ ಬಾತ್ ಮತ್ತು ಫೋನ್
1859 ★ ಸಭೆಸಮಾರಂಭ ಅಂಗಣ, ವಿಶಾಲ ಲಾನ್ಸ್, ರೂಫ್‌ಗಾರ್ಡನ್
2200 ★ ಕೂಟ ಮತ್ತು ಮದುವೆಗಳಿಗೆ ಬಾಂಬು ಮನೆ
2211 ★ ಸೊಗಸಾದ ತಯಾರಿಕೆ
1873 ★ ಚುರುಕಾದ ಮತ್ತು ವಿನಯಪೂರ್ವಕ ಸೇವೆ

★

ಶುಚಿ ರುಚಿ ಉಪಾಹಾರ ಮತ್ತು ಭೋಜನಕ್ಕೆ

ಚಂದ್ರಕೆಫೆ

ಫೋನ್ : 1280

ಉದ್ಯೋಗ ಸೌಕರ್ಯ ವಿಸ್ತರಣೆ

(ಶ್ರೀ ಕೆ ಬಿ ಶರ್ಮರವರ ಲೇಖನದಿಂದ)

ಹತ್ತೊಂಭತ್ತು ವರ್ಷಗಳ ಹಿಂದೆ ಇದೇ ದಿನ ನಾವು ಪ್ರಥಮ ಗಣರಾಜ್ಯ ದಿನೋತ್ಸವವನ್ನು ಆಚರಿಸಿದೆವು. ಮೊದಲ ಗಣರಾಜ್ಯ ದಿನೋತ್ಸವದಲ್ಲಿ ಭಾಗವಹಿಸಿದ್ದವರು, ರಾಷ್ಟ್ರವು ಆಗ ನಮಗೆ ತೋರಿಸಿದ ಸಂತೋಷ-ಸಂಭ್ರಮಗಳು, ಇಟ್ಟುಕೊಂಡಿದ್ದ ನಿರೀಕ್ಷೆಗಳು ಸ್ಪಷ್ಟವಾಗಿ ನೆನಪಿನಲ್ಲಿದೆ; ವರ್ಷಗಳು ಉರುಳಿದಂತೆ ಇವು ಕಡಮೆಯಾಗಿ, ಜಾಗರೂಕತೆಯಿಂದ ಪರಿತೀಲಿಸುವ ಮನೋಭಾವ ಬಲವಾಗುತ್ತಿದೆ. ರಾಷ್ಟ್ರವು ಪ್ರಗತಿಪಥದಲ್ಲಿ ಮುನ್ನಡೆಯಲು ಅತ್ಯವಶ್ಯಕವಾಗಿ ನಿರ್ವಹಿಸಲೇ ಬೇಕಾದ ಒಂದು ಕರ್ತವ್ಯವಾಗಬೇಕು.

ಆರ್ಥಿಕ ವೃದ್ಧಿ ಯೋಜನೆಗಳಲ್ಲಿ ಬಹಳಷ್ಟು ಹಣವನ್ನು ತೊಡಗಿಸಲಾಗಿದೆ; ಇದರಿಂದ ರಾಷ್ಟ್ರದ ಸ್ವರೂಪವೇ ಬದಲಾಗಿದೆ. ಉದಾಹರಣೆಗೆ ಮೊದಲು ಯೋಜನೆಯಲ್ಲಿ ಸರಕಾರಿ ಕ್ಷೇತ್ರದಲ್ಲಿ ರೂ. 1966 ಕೋಟಿ ಬಂಡವಾಳ ತೊಡಗಿಸಲಾಗಿದ್ದವು; ಎರಡನೇ ಯೋಜನೆಯಲ್ಲಿ ಅದು ರೂ. 4672 ಕೋಟಿಗಳಷ್ಟು, ಮೂರನೇ ಯೋಜನೆಯಲ್ಲಿ ರೂ. 8630 ಕೋಟಿಗಳಷ್ಟಾಯಿತು.

ನಮ್ಮ ದೇಶದಲ್ಲಿ ಇಂದು ಹತ್ತು ಲಕ್ಷಕ್ಕೂ ಹೆಚ್ಚು ಮಂದಿ ಸುಶಿಕ್ಷಿತ ಉದ್ಯೋಗಾರ್ಥಿಗಳಿದ್ದಾರೆ; ಉದ್ಯೋಗ ವಿನಿಮಯ ಕಚೇರಿಗಳ ರಿಜಿಸ್ಟರುಗಳಲ್ಲಿ ದಾಖಲಾಗಿರುವ ಸಂಖ್ಯೆ ಇದು.

ನಾಲ್ಕನೇ ಯೋಜನೆ ಪೂರ್ಣಗೊಂಡ ನಂತರವೂ ಸಹ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಎಂಜಿನಿಯರುಗಳೂ ಸುಸ್ತಾದ ತಾಂತ್ರಿಕ ಸಿಬ್ಬಂದಿ ಹೆಚ್ಚುವರಿಯಾಗುವ ಸಂಭವವಿದೆಯೆಂದು ಕೆಲವರು ಭಯಪಡುತ್ತಿದ್ದಾರೆ. ಎಂಜಿನೀರುಂಗು ಉದ್ಯೋಗಾರ್ಥಿಗಳ ಮಟ್ಟಗೆ ಈ ದಿಶೆಯಲ್ಲಿ ಕೆಲಮಟ್ಟಗೆ ಪ್ರಗತಿಯಾಗಿದ್ದರೂ ಇತರ ಪದವೀಧರರು ಮತ್ತು ಮೆಟ್ರಿಕ್ಯುಲೇಷನ್ ಪಾಸಾದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶವನ್ನು ಒದಗಿಸಲು ಮಾಡಬೇಕಾಗಿರುವದು ಇನ್ನೂ ಬಹಳಷ್ಟಿದೆ.

★

ಗಾಂಧಿ ವಾಣಿ

ನಾವು ಎಷ್ಟೇ ತೊಂದರೆಗಳನ್ನು ಎದುರಿಸಿದರೂ, ಎಷ್ಟೇ ನೋವನ್ನು ಅನುಭವಿಸಿದರೂ ಸತ್ಯಶೋಧನೆಯನ್ನು ಕೈಬಿಡಬಾರದು. ಏಕೆಂದರೆ ಸತ್ಯವೇ ದೇವರು.

●

ಹಿಂಸೆ ಪಶುಗಳ ಜೀವನದ ನಿಯಮ. ಅಹಿಂಸೆ ಮಾನವ ಜೀವದೆದೆ ನಿಯಮ.

○

ನನ್ನ – ನಮ್ಮ – ಕಲ್ಪನೆಯ ಸ್ವರಾಜ್ಯದಲ್ಲಿ ಕುಲ – ಜಾತಿ ಮುಂತಾದ ಭೇದಗಳಿಲ್ಲ.

●

ಇತರರು ಮಾಡಿರುವ ತ್ಯಾಗಕ್ಕಿಂತ ಸ್ವಾರ್ಥತ್ಯಾಗವೇ ಸರ್ವಶ್ರೇಷ್ಠ ಎಂಬುದು ಎಲ್ಲರೂ ಒಪ್ಪಿರುವ ವಿಚಾರ.

★

ಸತ್ಯನಿಷ್ಠೆಯೇ ನಮ್ಮ ಅಸ್ತಿತ್ವದ ಔಚಿತ್ಯವಾಗಿದೆ.

Mysore Government Electric Factory

MYSORE ROAD, BANGALORE-2.

.... Established in 1934 ....

Manufacturers and distributors of

1. Power Transformers
2. Transmission Line Tower
3. Scientific Surveying Instruments
4. Plastic Industrial Articles and
5. Street Light Fittings

ವುಡ್‌ಲ್ಯಾಂಡ್ಸ್ ಜಯಪ್ರದ 2ನೇ ವಾರ

.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಆ ಮೈ ನಾ ಮೈ

ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಚೋಪ್ರ, ರಾಜೇಂದ್ರನಾಥ್, ಮದನಪುರಿ — ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ

[ದಿನ 3 ಪ್ರದರ್ಶನಗಳು]

ಆಪೆರಾ— 24-1-69 ರಿಂದ

— ಅತ್ಯಮೋಘ ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimhaiyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.

Protect the Cow

Edited, Printed & Published by Dharmaprachare Nirata M. Srikrishna Rao (Proprietor) at the Satyavadi Press Chamarajapuram, Mysoe 4

ನಿಮ್ಮ ನೆಚ್ಚಿನ ಮೈಸೂರು ಗಂಧದ ಸಾಬೂನು

ಈಗ ಹೊಸ ರೂಪದಲ್ಲಿ ಬಂದಿದೆ.

ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕ್ಯುಮ್ ಸೋಪ್ ಪ್ಲಾಂಟ್

ಈ ಸಾಬೂನಿಗೆ ಮೊದಲಿನ ಗೋಲಾಕಾರದ ಬದಲು

ಚೌಕಾಕಾರದ ರೂಪವನ್ನು ನೀಡಿದೆ.

ಆಕಾರದಲ್ಲಿಯ ಬದಲಾವಣೆಯಿಂದ ಅಳತೆ ಕುಗ್ಗಿಲ್ಲ

ಮತ್ತು ಸುವಾಸನೆ ಬದಲಾಗಿಲ್ಲ.

ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ,

ಬೆಂಗಳೂರು

ಇದೀಗ

ಮೈಸೂರು ಸರ್ಕಾರದ ರೇಷ್ಮೆ ನೇಯ್ಗೆ ಕಾರ್ಖಾನೆಯಿಂದ

ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು

ಮನಮೋಹಕ ನಮೂನೆಯ

ವಿಶಿಷ್ಟ ನಯಗಾರಿಕೆಯ

ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ.

★

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ,

ಪಾನಂದವಾಡಿ ರಸ್ತೆ, ಮೈಸೂರು-4

ಆಹ್ಲಾದಕರ ಸುವಾಸನೆ

ಮೈಸೂರು ಗಂಧದ ಎಣ್ಣೆಯು ತನ್ನ ಶ್ರೇಷ್ಠತೆಯಿಂದ
ಜಗದ್ವಿಖ್ಯಾತಿಯನ್ನು ಪಡೆದಿದೆ.

★

ಪರಿಶುದ್ಧವಾದ ಗಂಧದ ಎಣ್ಣೆಯು ಮೈಸೂರು
ಸರ್ಕಾರದ ಸೀಲು ಮತ್ತು ಲೇಬಲ್‌ಗಳುಳ್ಳ
ಸೀಸೆಗಳಲ್ಲಿ ಮಾತ್ರ ದೊರೆಯುತ್ತವೆ.

ಮೈಸೂರು ಸರಕಾರದ ಗಂಧದ ಎಣ್ಣೆ
ಕಾರ್ಖಾನೆ.

ಮೈಸೂರು ಮತ್ತು ಶಿವಮೊಗ್ಗ.

SHAKTI SUDHA

A Superb Tonic



Help The Gorakshana

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ನಮ್ಮಲ್ಲಿ ದೊರೆಯುತ್ತವೆ

Quality Printing — Neat Binding

Lakshminarasimha Press

Sivarampet, Mysore

ಮೈಸೂರು ಉಪಕರಣಗಳ ಕಾರ್ಖಾನೆ

ಹಾಸನ

(ಮೈಸೂರು ಸರಕಾರದ ಉದ್ದಿಮೆ)

ಚೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ದರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರಗೆ ಹಚ್ಚಬಹುದು

ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ
ದೀರ್ಘಕಾಲ ಬಾಳಿಕೆ ಬರುತ್ತವೆ
ಇವರಲ್ಲಿ ಹಣ ತೊಡಗಿಸುವುದು ಒಂದು ಸುದೈವ.

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ ಪತ್ರವ್ಯವಹಾರ
ಮಾಡಬಹುದು